## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

**ಪಿಡಬ್ಲ್ಯೂ:11**

**ಸ್ಪೆಷಲ್ ಕೇಸ್ ಸಂಖ್ಯೆ: 506/23 ಸಿಡಬ್ಲ್ಯೂ:17**

**ಸಾಕ್ಷಿದಾರರ ಹೆಸರು** : ಹರೀಶ್ ಕುಮಾರ್

**ತಂದೆ ಹೆಸರು** : ಕೋಟಿ ಪೂಜಾರಿ

**ವಯಸ್ಸು** : 45

**ವೃತ್ತಿ** : ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಮೆಸ್ಕಾಂ ತಲ್ಲೂರು

**ವಾಸ** : ಕುಂದಾಪುರ

**ದಿನಾಂಕ: 18-03-2026** ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು 2023 ಜುಲೈ ತಿಂಗಳಿನಿಂದ ತಲ್ಲೂರು ಮೆಸ್ಕಾಂ ಕಚೇರಿಯಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದೇನೆ.

ದಿನಾಂಕ:22-02-2023 ರಂದು ಪ್ರಕರಣದ ತನಿಖಾಧಿಕಾರಿಯವರು ನನಗೆ ಗುಜ್ಜಾಡಿ ಗ್ರಾಮದ ಕೊಡಪಾಡಿ ಹೋಲಿಕ್ರಾಸ್ ಆಶ್ರಮದ ಹತ್ತಿರ ಇರುವ ಸರಕಾರಿ ಜಾಗದಲ್ಲಿ ನಿರ್ಮಾಣ ಮಾಡಿದಂತಹಾ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡಲಾಗಿದೆಯೇ ಎಂಬ ಬಗ್ಗೆ ಮಾಹಿತಿ ಕೇಳಿದ್ದು ಅದರಂತೆ ನಾನು ದಾಖಲಾತಿ ಜೊತೆಯಲ್ಲಿ ಮಾಹಿತಿ ನೀಡಿರುತ್ತೇನೆ. ಸಾಕ್ಷಿ ಮಾಹಿತಿ ಕೇಳಿ ನೀಡಿದ ಕೋರಿಕೆ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ದಿ:03-03-2023 ರಂದು ದಾಖಲಾತಿಗಳೊಂದಿಗೆ ಮಾಹಿತಿ ನೀಡಿರುತ್ತೇನೆ. ಸಾಕ್ಷಿ ಸದ್ರಿ ಮಾಹಿತಿ ಪತ್ರವನ್ನು ದಾಖಲೆಯೊಂದಿಗೆ ಹಾಜರುಪಡಿಸಿದ್ದು ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-14 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಪಿ ಕೆ ಎಸ್ ವಕೀಲರಿಂದ**

ಸರಕಾರದ ಬೆಳಕು ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಇಲ್ಲದ ವಾಸ್ತವ್ಯದ ಮನೆಗಳಿಗೆ ಸಂಪರ್ಕ ನೀಡುವಂತಹಾ ಯೋಜನೆಯಾಗಿರುತ್ತದೆ ಎಂದರೆ ಸರಿ. ಸದ್ರಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ನೀಡುವ ಪೂರ್ವದಲ್ಲಿ ಫಲಾನುಭವಿಗಳ ಪಟ್ಟಿಯನ್ನು ಸಂಬಂಧಪಟ್ಟ ಪಂಚ್ಯಾತ್ ನಿಂದ ನಾವು ಪಡೆದುಕೊಳ್ಳುತ್ತೇವೆ ಎಂದರೆ ಸರಿ ಅಲ್ಲಾ. ದಿನಾಂಕಃ06-11-2021 ಕ್ಕೆ ಗುಜ್ಜಾಡಿ ಗ್ರಾಮದ ಪಿ ಡಿ ಓ ರವರು ತಮ್ಮ ಗ್ರಾಮದ ಫಲಾನುಭವಿಗಳ ಪಟ್ಟಿಯನ್ನು ನಮ್ಮ ಇಲಾಖೆಗೆ ನೀಡಿರುತ್ತಾರೆ ಎಂದರೆ ಸರಿ. ಸದ್ರಿ ಫಲಾನುಭವಿಗಳ ಪಟ್ಟಿಯಲ್ಲಿ ನ್ಯಾಯಾಲಯದ ಮುಂದಿರುವಂತಹಾ 1 ನೇ ಆರೋಪಿ ಭಾರತಿ ಗಾಣಿಗ ಹೆಸರು ಕ್ರಮ ಸಂಖ್ಯೆ 4 ರಲ್ಲಿದೆ ಎಂದರೆ ಸರಿ. ಸದ್ರಿ ಪಟ್ಟಿಯನ್ನು ಪಡೆದುಕೊಂಡ ನಂತರ ಸ್ತಳಕ್ಕೆ ಭೇಟಿ ಕೊಟ್ಟು ಕಟ್ಟಡದ ಪರಿಶೀಲನೆ ಮಾಡಿ ನಾವು 1 ನೇ ಆರೋಪಿ ಭಾರತಿ ಗಾಣಿಗ ಇವಳ ವಾಸ್ತವ್ಯದ ಕಟ್ಟಡಕ್ಕೆ ಬೆಳಕು ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಿದ್ದೇವೆ. ಆ ಬಗ್ಗೆ ನಾನು ನಿಪಿ-14 ವರದಿಯಲ್ಲಿಯೂ ಸಹಾ ಕಾಣಿಸಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ. ಸದ್ರಿ ವಿದ್ಯುತ್ ಸಂಪರ್ಕ ನೀಡಿದ 9 ತಿಂಗಳ ನಂತರ ದೇವಿ ಎನ್ನುವವರು ಮತ್ತು ಪಂಚ್ಯಾತ್ ನವರು ವಿದ್ಯುತ್ ಸಂಪರ್ಕವನ್ನು ಖಡಿತಗೊಳಿಸಬೇಕೆಂದು ಒಂದು ಅರ್ಜಿಯನ್ನು ನೀಡಿದ್ದು ಈ ಬಗ್ಗೆ ನಮ್ಮ ಇಲಾಖೆಯವರು ದಿನಾಂಕಃ11-04-2022 ಕ್ಕೆ ಸಂಬಂಧಪಟ್ಟ ಪಿಡಿಓ ರವರಿಗೆ ನಾವು ಸ್ತಳಕ್ಕೆ ಭೇಟಿ ಕೊಟ್ಟು ವಾಸ್ತವ್ಯವನ್ನು ಖಾತ್ರಿಪಡಿಸಿಕೊಂಡು ಬೆಳಕು ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡಿದ್ದೇವೆ ಅಂತ ಉತ್ತರ ನೀಡಿದ್ದೇವೆ. ಸಾಕ್ಷಿ ನಾವು ದೇವಿ ರವರಿಗೂ ಸಹಾ ಅದೇ ಉತ್ತರ ನೀಡಿದ್ದೇವೆ ಎಂದು ನುಡಿಯುತ್ತಾರೆ. 1 ನೇ ಆರೋಪಿತಳು ಮೂಲ ದಾವೆ ನಂಬ್ರ 43/2023 ನ್ನು ದಾಖಲಿಸಿ ತನ್ನ ಮನೆಗೆ ನೀಡಿದ ಖಡಿತಗೊಳಿಸಬಾರದೆಂದು ನಮ್ಮ ಇಲಾಖೆ ವಿರುದ್ಧ ಆದೇಶವನ್ನು ಪಡೆದುಕೊಂಡಿದ್ದಾಳೆ ಎಂದರೆ ಸಾಕ್ಷಿ ನ್ಯಾಯಾಲಯದಲ್ಲಿ ಪ್ರಕರಣಣ ದಾಖಲಾಗಿದ್ದು ಗೊತ್ತು ಆದೇಶದ ಬಗ್ಗೆ ಗೊತ್ತಿಲ್ಲ ಅಂತ ನುಡಿಯುತ್ತಾರೆ. ಈಗಲೂ ಸಹಾ 1 ನೇ ಆರೋಪಿತಳ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಇದೆ ಎಂದರೆ ಸರಿ. ಈ ಪ್ರಕರಣದ ಫಿರ್ಯಾದಿದಾರಳಾದ ದೇವಿ ರವರು ದಲಿತರಾಗಿರುವುದರಿಂದ ಅವರ ಸಂಘದ ಒತ್ತಡಕ್ಕೆ ಮಣಿಕ ನೈಜತೆಯನ್ನು ಮರೆಮಾಚಿ ನಾನು ನಿಪಿ-14 ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿ ಅಲ್ಲಾ.

<u>ಮರು ವಿಚಾರಣೆ:</u> ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**